ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 3, July-August 2025, Pp. 181-184
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಅಜ್ಞಾತವಾಸಿ ಮತ್ತು ಕೊನೆಯ ಗಿರಾಕಿ ಕಥೆಗಳಲ್ಲಿ ಅಸ್ತಿತ್ವದ ನೆಲೆ

**ಡಾ. ಚಾಂದಸಾಬ ಮುಜಾವರ**
ಅತಿಥಿ ಉಪನ್ಯಾಸಕರು ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

***Abstract:***
*ಸಾಮಾಜಿಕ ವ್ಯವಸ್ಥೆಯಲ್ಲಿನ ಬದಲಾವಣೆಯನ್ನು ಗ್ರಹಿಸುತ್ತಾ ಸೂಕ್ಷ್ಮ ವಿಷಯವನ್ನು ಕೂಡ ಕಥನ ರೂಪಕ್ಕಿಳಿಸುವ ಸಣ್ಣಕಥೆ, ಕಾಲದ ಸಂವೇದನೆಯೊಂದಿಗೆ ಪ್ರತಿರೋಧ ನಿರಾಕರಣೆಯ ಮೂಲಕ ವೈಚಾರಿಕ ಅರಿವು ಮೂಡಿಸುವಂತೆ ಕೆಲಸ ಮಾಡಿದೆ. ಸಮಾಜದಲ್ಲಿ ಬದಲಾಗುತ್ತಿರುವ ವಿಚಾರಗಳಿಗೆ ಪ್ರಜ್ಞಾಪೂರ್ವಕವಾಗಿ ಹಾಗೂ ಅಪ್ರಜ್ಞಾಪೂರ್ವಕವಾಗಿ ಕಥೆಗಾರರು ಗ್ರಹಿಸುವ ಮತ್ತು ತಾಳುವ ನಿಲುವುಗಳನ್ನು ಚರ್ಚೆಗೆ ಒಳಗು ಮಾಡಿ ವಿಷಯದ ಸಂವೇದನೆಯನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಅನಿವಾರ್ಯವಾಗಿದೆ. ಮನುಷ್ಯ ತನ್ನ ಮೂಲಭೂತತೆಯಿಂದ ಸಹಜವಾಗಿ ಬದುಕನ್ನು ಕಟ್ಟಿಕೊಡಲು ಪ್ರಭುತ್ವ ಎಂಬ ಹಿಡಿತದಿಂದ ಬಿಡಿಸಿಕೊಳ್ಳಲು ತನ್ನದೆಯಾದ ಪ್ರತಿರೋಧ ಎಂಬ ಅಸ್ತ್ರವನ್ನು ಸಮುದಾಯದೊಳಗೆ ತೋರಿ ವ್ಯವಸ್ಥೆಯಲ್ಲಿ ಸ್ವತಂತ್ರವಾಗಿ ಬದುಕುವ ಮನೋಧರ್ಮವನ್ನು ಬೆಳೆಸಿಕೊಂಡಿದ್ದಾನೆ. ಇದು ಪರಂಪರೆಯನ್ನು ಪ್ರಶ್ನಿಸುವುದಲ್ಲದೆ ಪ್ರತಿಭಟನೆ ಕಾರ್ಯದೊಂದಿಗೆ ಅಸ್ತಿತ್ವವನ್ನು ಉಳಿಸಿಕೊಂಡು ಸಮಾನವಾಗಿ ಬದುಕುವ ಮತ್ತು ಅವಕಾಶಗಳನ್ನು ಪಡೆಯುವ ನೆಲೆಗಳನ್ನು ಹುಡುಕಿ ಕೊಡುವ ದಾರಿಗಳನ್ನು ಕಂಡುಕೊಂಡಿದ್ದಾನೆ. ಪ್ರಮುಖವಾಗಿ ಕಥೆಗಳಲ್ಲಿನ ಪ್ರಭುತ್ವದ ಹಿಡಿತ, ಅದರ ಯಜಮಾನಿಕೆಯ ಧೋರಣೆಗಳು ಮತ್ತು ಶೋಷಣೆಯ ನೆಲೆಯನ್ನು ಹೇಗೆ ಸಾಮಾಜಿಕ ಸಮುದಾಯದಲ್ಲಿ ಅಭದ್ರತೆಯನ್ನು ತಂದಿದೆ ಹಾಗೂ ಇದಕ್ಕೆ ಉಪಯೋಗವಾಗಿ ಸಮಾಜವು ಹೇಗೆ ಪ್ರತಿಭಟಿಸಿ ಪ್ರತಿರೋಧಾತ್ಮಕವಾಗಿ ನಿಲ್ಲುತ್ತದೆ ಎಂಬುದು ಕಥಾಸಾಹಿತ್ಯದಲ್ಲಿನ ಅಧ್ಯಯನದ ಮೂಲಕ ತಿಳಿಯುವುದಾಗಿದೆ.*

**Keywords:** *ಕನ್ನಡ ಸಾಹಿತ್ಯ, ಅಜ್ಞಾತವಾಸಿ, ಕೊನೆಯ ಗಿರಾಕಿ, ಮಹಿಳೆ ಮತ್ತು ಶೋಷಣೆ*

## ಪೀಠಿಕೆ

ಅಜ್ಞಾತವಾಸಿ ಕತೆಯನ್ನು ಬಸವರಾಜ ಕಟ್ಟೀಮನಿ ಅವರು ಬರೆದಿದ್ದಾರೆ. ಇವರು ತುಂಬಾ ಪ್ರಸಿದ್ಧ ಮತ್ತು ಬಹುಮುಖ್ಯ ಪ್ರಗತಿಶೀಲ ಚಳುವಳಿಯ ಲೇಖಕರಲ್ಲಿ ಒಬ್ಬರು. ಅವರು ಸಮಾಜದಲ್ಲಿ ನಡೆಯುವಂತಹ ವಾಸ್ತವ ಸತ್ಯ ಘಟನೆಗಳ ಆಧಾರಿತವಾಗಿ ಕತೆಗಳನ್ನು ರಚಿಸಿದ್ದಾರೆ. ಕಣ್ಣು, ಕಿವಿ ತೆರೆದಿಟ್ಟ ಸುಂದರವಾದ ಬದುಕಿನ ಹೊಸದಾರಿಗೆ ಕೊಂಡೊಯ್ಯುವ ಸ್ಫೂರ್ತಿ ನೀಡುವಂತಹ ಸಾಹಿತ್ಯ ರಚನೆ ಮಾಡುವುದೇ ಪ್ರಗತಿಶೀಲತೆ ಎಂಬ ನಿಲುವು ಅವರದಾಗಿತ್ತು.

ಅಜ್ಞಾತವಾಸಿ ಕತೆಯು 1942ರ ಆಗಸ್ಟ್ ಚಳುವಳಿಯ ಹಿನ್ನಲೆಯಲ್ಲಿ ರಚಿಸಿದ ಏಳು ಕತೆಗಳುಳ್ಳ ‘ಆಗಸ್ಟ್ ಒಂಬತ್ತು (ಮೇ 1947) ಕಥಾಸಂಕಲನದಿಂದ ಈ ಕತೆಯು ಆರಿಸಿರುವ ‘ಅಜ್ಞಾತವಾಸಿ’ ಕತೆಯೂ ಸ್ವಾತಂತ್ರ್ಯದ ಪೂರ್ವದಲ್ಲಿ ನಡೆಯುವ ಘಟನೆಗಳನ್ನು ಒಳಗೊಂಡ ಮತ್ತು

**Please cite this article as:** ಚಾಂದಸಾಬ ಮುಜಾವರ. (2025). ಅಜ್ಞಾತವಾಸಿ ಮತ್ತು ಕೊನೆಯ ಗಿರಾಕಿ ಕಥೆಗಳಲ್ಲಿ ಅಸ್ತಿತ್ವದ ನೆಲೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 4(3), 181–184

ಚಳುವಳಿಯ ನಿಲುವುಗಳನ್ನು ಪ್ರತಿಪಾದಿಸುವಂತಹ ಕತೆಗಳಲ್ಲಿ ಪ್ರಮುಖ ಸ್ಥಾನ ಪಡೆದುಕೊಂಡ ಕತೆ. ನವೋದಯದ ಚಳುವಳಿಯಲ್ಲಿ ಗಾಢವಾಗಿ ಮೂಡದ ಸಾಹಿತ್ಯ ಪ್ರಕಾರದ ಕೆಲವು ಪ್ರಮುಖ ಅಂಶಗಳನ್ನು ಪ್ರಗತಿಶೀಲ ಸಾಹಿತ್ಯದಲ್ಲಿ ಕಾಣಬಹುದು. ಉತ್ಕಟತೆ, ಉದ್ವಿಗ್ನತೆ, ಸ್ವಾತಂತ್ರ್ಯ ಹೋರಾಟ, ಗೋವಾದ ವಿಮೋಚನೆ ಹಾಗೂ ಪಾಕಿಸ್ತಾನದ ದಾಳಿ ಇತ್ಯಾದಿ ವಿಷಯಗಳ ಹಿನ್ನಲೆಯಲ್ಲಿ ಕಥಾಸಾಹಿತ್ಯದಲ್ಲಿ ಕೃಷಿಮಾಡಿದವರಲ್ಲಿ ಬಸವರಾಜ ಕಟ್ಟೀಮನಿ ಪ್ರಮುಖರು.

ಅವರ ಕಥೆಗಳಲ್ಲಿ ವಸ್ತುವನ್ನು ನಿರ್ವಹಿಸುವಲ್ಲಿ ಕನ್ನಡ ಕಥಾಪರಂಪರೆಗೆ ಸಾಮಾನ್ಯವಾಗಿರುವ ಮನೋಧೋರಣೆ ಮತ್ತು ಭಾವ ಪಕ್ಷಪಾತವನ್ನು ಈ ಕತೆಯಲ್ಲಿ ಅತ್ಯಂತ ನಿಖರವಾಗಿ ಪ್ರತಿಪಾದಿಸುವಂತಿದೆ. ಕನ್ನಡದ ಐತಿಹಾಸಿಕ ಕಥಾಪರಂಪರೆ ಪ್ರತಿನಿಧಿಸುವ ಧೋರಣೆಗಳು ಇದು ಬಹುಮಟ್ಟಿಗೆ ಸಂವಾದಿಯಾಗಿದೆ. ಅಜ್ಞಾತವಾಸಿ ಕತೆಯ ನಾಯಕ ಚೆನ್ನಬಸಪ್ಪ. ಒಬ್ಬ ವ್ಯಕ್ತಿಯ ನಿರ್ಧಾರ ಮಾತ್ರವಲ್ಲ ಅದು ಇಡೀ ಕತೆಯ ನಾಯಕನ ನಿರ್ಧಾರ, ಎಂತಹ ಸಂಕಟದಲ್ಲೂ ಜೀವಂತವಾಗಿರುವ ಗಂಡು ಭಾರತದ ನಿರ್ಧಾರ ಎಂಬ ಈ ಕತೆಯಲ್ಲಿ ಬರುವಂತಹ ಸಾಲುಗಳು ಅತ್ಯಂತ ಸಂವೇದನಾಶೀಲವಾಗಿವೆ. ಪೋಲೀಸ ಅಧಿಕಾರಿಗಳು ಚೆನ್ನಬಸಪ್ಪನ ಹೆಂಡತಿಯಾದ ನಾಗಮ್ಮಳನ್ನು ಎಂಟು ದಿನ ಹಿಂಸಿಸಿದರು. ಪೋಲಿಸರ ಚಿತ್ರಹಿಂಸೆಗೆ ಎದೆಗೊಡಲು ಸಿದ್ಧಳಾಗಿ ಎದ್ದು ಕುಳಿತವಳು ನಾಗಮ್ಮ. ಅವಳಿಗೆ ಎಷ್ಟೇ ಚಿತ್ರಹಿಂಸೆ ಕೊಟ್ಟರೂ ಸಹ ಅವಳ ಚಿತ್ರದಲ್ಲಿರುವ ಒಂದೇ ವಿಚಾರ ಅದುವೆ ಪತಿ! ಪತಿ ತನ್ನ ಪತಿ.

ಕುರು ಸಭೆಯಲ್ಲಿ ದ್ರೌಪದಿಯ ಮಾನ ರಕ್ಷಣೆ ಮಾಡಿದ ಕೃಷ್ಣಾ ಬಂದು ನನ್ನ ಕಾಪಾಡು ಎಂದು ಶ್ರೀಹರಿಯನ್ನು ಪ್ರಾರ್ಥಿಸಿದಳು. ಯಾರು ಇಲ್ಲವೇ ಇವರನ್ನು ತಡೆಯುವವರು? ಯಾರು ಇಲ್ಲವೇ? ಎಂದು ಹೇಳುವ ರೀತಿ ಇದೆಯಲ್ಲ ಅದು ಕರುಳು ಹಿಂಡುವಂತಹದ್ದು, ಪೋಲಿಸರು ನಡೆದುಕೊಳ್ಳುವ ವರ್ತನೆ ಅಷ್ಟು ಅಸಹನೀಯವಾಗಿತ್ತು. ಪೋಲಿಸರ ಹಿಂಸೆ, ದಬ್ಬಾಳಿಕೆ, ಅನ್ಯಾಯ, ಅತ್ಯಾಚಾರ ಹೀಗೆ ಅನೇಕ ಶಬ್ಧಗಳನ್ನು ಬಳಸಿದರೂ ಸಾಲದು ಏಕೆಂದರೆ ಕತೆಯಲ್ಲಿ ಸ್ತ್ರೀಯರನ್ನು ಅತ್ಯಂತ ಕೆಟ್ಟ ರೀತಿಯಲ್ಲಿ ಅಮಾನವೀಯ ರೀತಿಯಲ್ಲಿ ಮತ್ತು ಪ್ರಾಣಿಗಿಂತಲೂ ಕೆಳಮಟ್ಟದಲ್ಲಿ ವರ್ತಿಸಿರುವ ಪೋಲಿಸರ ಮನೋಧೋರಣೆಯ ಚಿತ್ರಣವನ್ನು ಕತೆಯಲ್ಲಿ ಕಟ್ಟಿಕೊಟ್ಟಿದ್ದಾರೆ.

ನಿರಂಜನ ಅವರು 1923 ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕುಳುಕುಂದ ಗ್ರಾಮದಲ್ಲಿ ಜನಿಸಿದರು. ಇವರು ಅನೇಕ ಕಥೆಗಳನ್ನು ಬರೆದಿದ್ದಾರೆ. ನಾಸ್ತಿಕ ಕೊಟ್ಟ ದೇವರು, ಒಂಟಿ ನಕ್ಷತ ನಕ್ಕಿತು, ಅನ್ನಪೂರ್ಣ, ರಕ್ತ ಸರೋವರ, ವಾರದ ಹುಡುಗ ಇತ್ಯಾದಿ. ನಿರಂಜನ ಅವರ ಪ್ರಗತಿಶೀಲ ಚಳುವಳಿಯಲ್ಲಿ ಬರುವ ಪ್ರಮುಖ ಲೇಖಕರು. ಅವರ ಕೊನೆಯ ಗಿರಾಕಿ ಕತೆಯು ತುಂಬಾ ಪ್ರಸಿದ್ಧವಾದುದು. ಕತೆಯ ಕೇಂದ್ರ ಪಾತ್ರ ಕಾಣಿ. ಅವಳು ಅನುಭವಿಸುವ ನೋವು, ಯಾತನೆಯನ್ನು ಮತ್ತು ಅವಳಿಗೆ ಕೊನೆಯ ಗಿರಾಕಿ ಆಗಿ ಬರುವ ಗಿಡುಗ ಈ ಎಲ್ಲ ಅಂಶಗಳನ್ನು ಕತೆಯು ಬಿಚ್ಚಿಡುತ್ತದೆ. ಸ್ತ್ರೀಯರ ಮೇಲೆ ಆಗುವ ಶೋಷಣೆಯನ್ನು ಕಾಣಬಹುದು. ಕಾಣಿಗೆ ಮಾತುಬಾರದಿದ್ದರೂ ಅವಳು ತನ್ನ ಭಾವನೆಗಳನ್ನು ಹಂಚಿಕೊಳ್ಳಲು ಅವಕಾಶ ಕೊಡದ ಪುರುಷ ಪ್ರಧಾನ ಸಮಾಜದಲ್ಲಿ ಮೌನವಾಗಿ ಅವರ ದಬ್ಬಾಳಿಕೆಯನ್ನು ಸಹಿಸಿಕೊಂಡಳು. ಪುರುಷರು ತಮಗೆ ಅನುಕೂಲವಾಗುವಂತೆ ಅವಳನ್ನು ಬಳಸಿಕೊಂಡರು.

ಸಮಾಜದ ನಿರ್ಲಕ್ಷ್ಯಕ್ಕೆ, ಶೋಷಣೆಗೆ ಒಳಗಾದ ಮೂಕಿ ಈ ಕ್ರೂರ ಮನಸ್ಸಿನ ಗಂಡಸಿನ ವರ್ತನೆಯನ್ನು ಸಹಿಸಿಕೊಂಡಳು. ಅನ್ಯಾಯ ಮತ್ತು ಕ್ರೂರ ಜಗತ್ತಿನಲ್ಲಿ ತಮ್ಮ ನೋವಿಗೆ ಮಾತುಕೊಡಲು ಸಾಧ್ಯವಿಲ್ಲದ ಲಕ್ಷಾಂತರ ಸ್ತ್ರೀಯರ ನೋವಿಗೆ ಸಂಕೇತ ಆಕೆ; ಆದರೆ ಅಜ್ಞಾತವಾಸಿ ಕತೆಯಲ್ಲಿ ಬರುವ

ನಾಗಮ್ಮ ತನಗೆ ಪೋಲಿಸರ ಚಿತ್ರಹಿಂಸೆಯನ್ನು ಸಹಿಸದೇ ಕುರುಸಭೆಯಲ್ಲಿ ಕೃಷ್ಣ ಬಂದು ಮಾನ ಕಾಪಾಡಿದಂತೆ ತನಗೂ ಶ್ರೀಹರಿ ಬಂದು ಕಾಪಾಡಲಿ ಎಂದು ಪ್ರಾರ್ಥಿಸುವಳು. ನಾಗಮ್ಮಳ ಮನಸ್ಸಿನಲ್ಲಿ ಅಳಿಸಲಾಗದ ಚಿತ್ರ ಒಂದೇ ಪತಿ ಪತಿ! ಪತಿ ಹೀಗೆ ಕತೆಯಲ್ಲಿ ಸ್ತ್ರೀಯರು ಅನುಭವಿಸುವ ನೋವು, ದುಃಖ–ದುಮ್ಮಾನಗಳನ್ನು ಒಂದು ಕತೆಯಲ್ಲಿ ಚಿತ್ರಿಸಿದರೆ, ಮಾತಾನಾಡಲು ಬಾರದ ಕಾಣಿ ಪುರುಷ ಪ್ರಧಾನ ಸಮಾಜದಲ್ಲಿ ಹೇಳಲಾರದಷ್ಟು ನೋವನ್ನು ಅನುಭವಿಸಿ ಸಂಕಟಪಡುವಳು.

ಆಕೆಯು ಒಲಿದ ಗಂಡನನ್ನು ನಂಬಿ ತನ್ನ ಹೆತ್ತವರನ್ನು ತೊರೆದು ಓಡಿ ಬಂದು ಹೊಸ ಬದುಕನ್ನು ಕಟ್ಟಿಕೊಳ್ಳುವ ತವಕದಲ್ಲಿರುವಳು ಆದರೆ ವಿಧಿಯಾಟ ಬೇರೆಯಾದುದು. ಅವಳು ನಂಬಿದ ಆ ವ್ಯಕ್ತಿ ಅವಳನ್ನು ನಡುನೀರಲ್ಲಿ ಕೈಬಿಟ್ಟನು. ಅವಳು ತನ್ನ ಹೊಟ್ಟೆಯ ಹಸಿವಿಗಾಗಿ ದೇಹದ ಹಸುವನ್ನು ನಿಗಿಸುವ ಕಾಯಕಕ್ಕೆ ಅಣಿಯಾಗುವಳು. ಅವನನ್ನು ನಂಬಿ ಬಂದದ್ದಕ್ಕಾಗಿ ಅವಳ ಬದುಕು ಅತಂತ್ರವಾಯಿತು. ಒಟ್ಟಿನಲ್ಲಿ ಸ್ತ್ರೀಯರು ಒಂದಲ್ಲ ಒಂದು ರೀತಿಯಲ್ಲಿ ಪುರುಷರಿಂದ ಶೋಷಣೆಗೆ ಒಳಗಾಗುವರು.

ಕಾಣಿಯೂ ವಯಸ್ಸಿಗೆ ಮೀರಿ ಮೈ ತುಂಬಿತ್ತು. ದೇಹಕ್ಕಾಗಿ ಹಂಬಲಿಸುವವರಿಗೆ ಮಾಂಸದೂಟವಾಗಿದ್ದಳು. ಹೊಟ್ಟೆಪಡಿಗಾಗಿ ನಾಯಿಯಂತೆ ಬೇರೆ ಪುರುಷರನ್ನು ತುತ್ತು ಅನ್ನಕ್ಕಾಗಿ ಹಿಂಬಾಲಿಸುವಳು. ಅವನು ತಾನಷ್ಟೇ ಸುಖಪಡದೇ ಅವಳನ್ನು ವ್ಯವಹಾರಕ್ಕೆ ಇಳಿಸುವನು. ಬೇರೆ ಪುರುಷರನ್ನು ಕರೆದುಕೊಂಡು ಬಂದು ಅವರ ಜೇಬಿನಲ್ಲಿ ಇರುವ ಹಣಕ್ಕೆ ದೃಷ್ಟಿಹಾಕುವನು. ಕಾಣಿ ಪರಪುರುಷನನ್ನು ಒಪ್ಪಿಕೊಳ್ಳಲು ಸಿದ್ಧವಾಗದಿದ್ದಕ್ಕೆ ಅವಳ ಮಾಲೀಕನಿಂದ ಚೆನ್ನಾಗಿ ಒಡೆಸಿಕೊಂಡಳು. ಅವಳು ಮೊಂಡು ಕೈಯವನನ್ನು ಪ್ರೀತಿಸಿದಷ್ಟು ಯಾರನ್ನು ಪ್ರೀತಿಸಲಿಲ್ಲ. ಆ ವ್ಯಕ್ತಿ ಕಾಣಿಗೆ ಎರಡು ಸೀರೆ, ಜಂಪರ್, ಉಣ್ಣೆಯ ಸ್ತ್ರೀ ಕೋಟು, ಮುಡಿಯಲು ಹೂ, ಮೂಗಿಗೆ ಒಡೆಯುವ ಎಣ್ಣೆ ಕೂದಲಿಗೆ, ಹೊಟ್ಟೆತುಂಬಾ ಊಟ ಇತ್ಯಾದಿ ಮೂಲಭೂತ ಸೌಕಾರ್ಯಕ್ಕಾಗಿ ದಿನ ಕಳೆದಳು.

ಕಾಣಿ ತನ್ನ ಅವಸ್ಥೆ ಹೀಗಾದುದನ್ನು ಯೋಚಿಸಿ ಮರಗುವಳು. ತನ್ನ ಹಳ್ಳಿ, ತಾನು ಹುಟ್ಟಿದ ಗುಡಿಸಲು, ತನ್ನ ಭಾಷೆಯನ್ನು ಆಡುವ ಜನರು, ಮೊಂಡಕೈ ಮೊದಲ ಜೊತೆಗಾರ ಇವರನ್ನು ನೆನಪಿಸಿಕೊಂಡು ದುಃಖಿಸಿದಳು. ಬಾಲ್ಯದ ನೂರೊಂದು ನೆನಪುಗಳು ಬಂದು, ಮುಖ ಸಣ್ಣದಾಯಿತು. ಅವಳ ತನ್ನ ಈ ಸ್ಥಿತಿಗೆ ಮೊಂಡಕೈಯ ಜೊತೆಗಾರನೇ ಕಾರಣವೆಂದು ಚಿಂತಿಸಿದಳು. ಆಕೆಯು ಹೊಟ್ಟೆಪಡಿಗಾಗಿ ಸಮೀಪದ ಹುಲ್ಲುಗಾವಲಿನ ಹಾಸಿಗೆಯಲ್ಲಿ ದಿನಕ್ಕೆ ಮೂರುಸಾರಿ ಸಾಯುವುದು, ಸತ್ತು ಜೀವಿಸುವ ಪರಿಪಾಠವಿತ್ತು. ಪ್ರೇಮಕಾಮಗಳನ್ನು ಹರಿಯದ ಅವಳಿಗೆ ಒಂದು ಹಿಡಿ ಕಡಲೆಕಾಯಿಯ ಸಲುವಾಗಿ ನೋವನ್ನು ಅನುಭವಿಸುವಳು. ಅವಳು ರೋಗಗಸ್ಥಳಾದ ಮೇಲೆಯೂ ಒಬ್ಬ ಭಿಕ್ಷುಕ ಅವಳಿಗೆ ಆರೈಕೆ ಮಾಡಿ ತನ್ನ ಆಸೆಯನ್ನು ಪೂರೈಸಿಕೊಳ್ಳುವನು ಆದರೂ ಕಾಣಿ ಮೂಕಿಯಾಗಿದ್ದಾಳೆ. ಅವನಿಂದಲೂ ತಪ್ಪಿಸಿಕೊಂಡ ಬಂದ ಕಾಣಿಗೆ ತಾಯಿ–ತಂದೆ, ಅಣ್ಣ–ತಮ್ಮ, ಮೊಂಡ ಕೈ ಜೊತೆಗಾರ ಪುನಃ ನೆನಪಾಗುತ್ತಾರೆ.

ತಟಕ್ಕನೆ ಬಂದ ಒಬ್ಬ ಆಸಾಮಿ ಅವಳನ್ನು ಕೈಬಿಸಿ ಕರೆದು ತನ್ನ ಇಚ್ಛೆಯನ್ನು ಪೂರೈಸಿಕೊಂಡು ಅವಳಿಗೆ ಹಣ ಕೊಡದೆ ಹೋಗುವಾಗ ಕಾಣಿ ಅಂಗಲಾಚಿ ಬೇಡುವಳು ಅವನು ಹಣ ಕೊಡುವ ಬದಲು ಆಕೆಗೆ ಗಂಟಲಿಗೆ ಕೈ ಹಾಕಿ ನೂಕುವನು. ಹೊಲಸು ರಂಡೆ ಎಂದು ಮೂದಲಿಸಿ ಆಕೆಯ ಹೊಟ್ಟೆಗೆ ಬೂಟುಗಾಲಿನಿಂದ ಒದ್ದನು. ಅವಳ ಉಸಿರಾಟ ಕೊನೆಯಾಯಿತು. ಅವಳ ದೇಹವನ್ನು ದೂರದಿಂದಲೇ ಸುತ್ತುವರೆದ ಗಿಡುಗ ಕಾಣಿಯ ಕೊನೆಯ ಗಿರಾಕಿ ಆಗಿದ್ದಾನೆ. ಕೊನೆಯಲ್ಲಿ ಹಸಿವು, ಶೋಷಣೆ, ರೋಗಗಳ ಪರಿಣಾಮದಿಂದಾಗಿ ಆಕೆ ಇನ್ನೂ ಹದಿನಾರನೇ ವಯಸ್ಸಿನಲ್ಲಿಯೇ ಇದ್ದು

ಸತ್ತಾಗ, ಅವಳ ಹೆಣದ ಮೇಲೆ ಗಿಡುಗವೊಂದು ಸುತ್ತುಹಾಕುತ್ತಾ, ಇನ್ನು ಉಳಿದಿರಬಹುದಾದ ಅವಳ ದೇಹದ ಮಾಂಸವನ್ನು ಕುಕ್ಕಿ, ಕುಕ್ಕಿ ತಿನ್ನಲು ಕಾಯುತ್ತಿರುವ ಕೊನೆಯ ಗಿರಾಕಿ ಆಗಿದೆ. ಆಕೆ ಸತ್ತರೂ ನಿಲ್ಲದ ಶೋಷಣೆಯ ಭೀಕರತೆ, ದೌರ್ಜನ್ಯ ಜೀವಂತಿಕೆ ಪಡೆದಿರುವ ಸಂಕೇತವಾಗಿದೆ. ಮೂಕಿಯೊಂದಿಗೆ ನಡೆದಿರುವ ದಬ್ಬಾಳಿಕೆಯು ಅಮಾನವೀಯ, ಅಸಹನೀಯವಾದುದು ಎಂಬ ಅಂಶವನ್ನು ಕತೆಯೂ ನಿರೂಪಿಸುತ್ತದೆ.

ಒಟ್ಟಾರೆಯಾಗಿ ಅಜ್ಞಾತವಾಸಿ ಮತ್ತು ಕೊನೆಯ ಗಿರಾಕಿ ಕತೆಯಲ್ಲಿ ಬರುವ ಇಬ್ಬರು ಹೆಣ್ಣುಮಕ್ಕಳು ಪುರುಷ ಪ್ರಧಾನ ಸಮಾಜದಲ್ಲಿ ನೋವನ್ನುಂಡವರು. ಚೆನ್ನಬಸಪ್ಪ ಜೈಲಿಗೆ ಹೋಗದಿದ್ದರೆ ಅವಳ ಹೆಂಡತಿ ನಾಗಮ್ಮ ಪೋಲೀಸ ಅಧಿಕಾರಿಯಿಂದ ದೌರ್ಜನಕ್ಕೆ ಒಳಗಾಗುವಳು. ದೈಹಿಕವಾಗಿ ಎಷ್ಟೇ ನೋವು ಅನುಭವಿಸಿದರೂ ಮಾನಸಿಕವಾಗಿ ಅವಳು ಪತಿಯ ಜಪಮಾಡುತ್ತಿದ್ದಳು. ತನ್ನನ್ನು ಕಷ್ಟದಿಂದ ಪಾರುಮಾಡಲು ಶ್ರೀಹರಿಯನ್ನು ನೆನಪಿಸಿಕೊಳ್ಳುವಳು. ಕೊನೆಯ ಗಿರಾಕಿಯಲ್ಲಿ ಬರುವ ಕಾಣಿ ಮೊಂಡಕೈ ಪುರುಷನನ್ನು ನಂಬಿ ಮೋಸ ಹೋದಳು. ಬಡತನದ ಮನೆಯಲ್ಲಿ ಹುಟ್ಟಿ ಬೆಳೆದ ಅವಳು ಸಾವಿನವರೆಗೂ ಕಷ್ಟವನ್ನೇ ಅನುಭವಿಸುವಳು. ಮನುಷ್ಯರಲ್ಲದೇ ಗಿಡುಗ ಕಾಣಿಯ ಕೊನೆಯ ಗಿರಾಕಿ ಆಗಿರುವ ವೃತ್ತಾಂತವನ್ನು ಕತೆಯು ನಿರೂಪಿಸುತ್ತದೆ.

**ಆಕರ ಗ್ರಂಥಗಳು**


- ಬಸವರಾಜ ಕಟ್ಟೀಮನಿ. (1947). ಆಗಸ್ಟ್ ಒಂಬತ್ತು ಇತರ ಕತೆಗಳು. ಪ್ರಭಾತ ಸಾಹಿತ್ಯ ಪ್ರಕಾಶನ
- ನಿರಂಜನ. *ಕೊನೆಯ ಗಿರಾಕಿ*


**ಪರಾಮರ್ಶನ ಗ್ರಂಥಗಳು**


- ಗಿರಡ್ಡಿ ಗೋವಿಂದರಾಜ. (2012). *ಸಮಗ್ರ ವಿಮರ್ಶೆ ಸಂಪುಟ–2.* ಸಪ್ನಬುಕ್ ಹೌಸ್.
- ಗಿರಡ್ಡಿಗೋವಿಂದರಾಜ. (2012). *ಸಮಗ್ರ ವಿಮರ್ಶೆ ಸಂಪುಟ–3.* ಸಪ್ನಬುಕ್ ಹೌಸ್.
- ಮಧುಸೂಧನಾಚಾರ್ಯ ಜೋಷಿ. (2010). *ಬಂಡಾಯ ಸಾಹಿತ್ಯ (ಹೈದರಾಬಾದ್ ಕರ್ನಾಟಕ ಪರಂಪರೆ).* ವಿಶ್ವಬಂಧು ಪ್ರಕಾಶನ.
- ನಾಯಕ, ಜಿ.ಎಚ್. (ಸಂ.). (2000). *ಶತಮಾನದ ಕನ್ನಡ ಸಾಹಿತ್ಯ.* ಶ್ರೀ ರಾಘವೇಂದ್ರ ಪ್ರಕಾಶನ.
- ಪುರುಷೋತ್ತಮ ಬಿಳಿಮಲೆ. (2017). *ಬಂಡಾಯ – ದಲಿತ ಚಳುವಳಿ ಮತ್ತು ಸಾಹಿತ್ಯ.* ಅಭಿನವ ಪ್ರಕಾಶನ.
- ಸುಮಿತ್ರಾಬಾಯಿ, ಬಿ.ಎನ್. (2018). *ಸ್ತ್ರೀವಾದ (ಒಂದು ಅವಲೋಕನ).* ಅಹರ್ನಿಶಿ ಪ್ರಕಾಶನ.